ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯುಷ್ ಆದ್ದು. [ನಂ. 20.

ಬೆಂಗಳೂರು, ಗುರುವಾರ, ಮೇ ತಾ॥ 16, ಸ್ಟ್ 1907.

II ನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗಳು ವಗೈರೆಯಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 19-20ನೆ ಏಪ್ರಿಲ್ 1907.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಟಿ. ನರಸೀಪುರದ ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು (283) ಫೈನಲ್ ಟೈಟಲ್ ಡೀಡ್ ಯಾನೆ ಪೈದಾಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವೆ.

(2) ಸದರಿ ತಾಲ್ಲೂಕಿನ ಅಮಲ್ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸುಗಳು ಬಂದಮೇಲೆ ಅವುಗಳನ್ನ ತಗದುಕೊಳ್ಳುವ ಬಗ್ಗೆ ಸದರಿ ಇನಾಂದಾರರು ಅರ್ಜಿ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟಿಸುಗಳನ್ನು ಪೋಸ್ಟ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

(3) ಸದರಿ ಚಿಲ್ಲರೆ ಇನಾಂಗಳ ಬಗ್ಗೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದುಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟನಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್ಟೆಂಡೆಂಟ್ ಆಫ್ ಇನಾಂ ಸೆಟ್ಲ್ಮೆಂಟ್ಸ್ ಇನ್ ಮೈಸೂರು.